## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯ ಸಹಾಯಕ ಕಾರ್ಯದರ್ಶಿ, ಶ್ರೀ ಕೃಷ್ಣಪ್ಪ ಲೋಹರ್, ಇವರನ್ನು ಸೇವೆಯಿಂದ ಅಮಾನತ್ತು ಪಡಿಸುವ ಬಗ್ಗೆ.

ಓದಲಾಗಿದೆ: 1.ಕರ್ನಾಟಕ ಲೋಕಾಯುಕ್ತರ ಅಪರ ಪೋಲೀಸ್ ಮಹಾ ನಿರ್ದೇಶಕರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಬಿಡಿ/ಸಿಆರ್-06/2015/ಬಿ.ಎಲ್.ಆರ್. ದಿನಾಂಕ:25-04-2015

2. ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 56 ಪಬವ 2015 ದಿ.30-4-2015

-------

ಪ್ರಸ್ತಾವನೆ:

ಬೆಂಗಳೂರು ನಗರ ಜಿಲ್ಲಾ ಪಂಚಾಯತಿಯ ಸಹಾಯಕ ಕಾರ್ಯದರ್ಶಿ, ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಕೃಷ್ಣಪ್ಪ ಲೋಹರ್, ಇವರು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುತ್ತಾರೆ ಎಂಬ ನಂಬಲರ್ಹ ಮಾಹಿತಿ ಆಧಾರದ ಮೇರೆಗೆ ಅವರ ವಿರುದ್ಧ ಬೆಂಗಳೂರು(ಗ್ರಾ) ಲೋಕಾಯುಕ್ತ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 06/2015 ಕಲಂ 13(1) (ಇ) ಸಹವಾಚನ 13 (2) ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ರೀತ್ಯ ದಿನಾಂಕ:26-03-2015 ರಂದು ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಈ ಸಂಬಂಧ ಅಗತ್ಯವಾದ ಶೋಧನಾ ವಾರಂಟ್‌ನ್ನು ದಿ.26-03-2015 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ಪಡೆದು, ದಿನಾಂಕ 27-03-2015 ರಂದು ಅಪಾದಿತ ಅಧಿಕಾರಿಯು ವಾಸವಾಗಿರುವ ಮನೆ ಸಂಖ್ಯೆ: 1889/8, 4ನೇ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ, ಬೆಂಗಳೂರು ಹಾಗೂ ಕಚೇರಿಗಳನ್ನು ಪಂಚ ಸಾಕ್ಷಿಗಳ ಸಮಕ್ಷಮ ಶೋಧಿಸಿ ಮಹಜರು ಕ್ರಮ ಜರುಗಿಸಲಾಗಿದ್ದು, ಇದುವರೆವಿಗಿನ ತನಿಖೆಯಿಂದ ಆರೋಪಿತ ಅಧಿಕಾರಿಯು ಈ ಕೆಳಗಿನಂತೆ ಚರ ಮತ್ತು ಸ್ಥಿರಾಸ್ತಿಯನ್ನು ಹೊಂದಿರುವುದು ಕಂಡು ಬಂದಿರುವುದರಿಂದ ಹಾಗೂ ಪ್ರಾಥಮಿಕ ತನಿಖೆಯಿಂದ ಆರೋಪಿತರು ತನ್ನ ಬಲ್ಲ ಮೂಲಗಳಗಿಂತ ಹೆಚ್ಚಿಗೆ ಹೊಂದಿರುವ ಅಕ್ರಮ ಆಸ್ತಿಗಳ ಮೌಲ್ಯ ರೂ. 1,31,74,750/- ಅಕ್ರಮ ಆಸ್ತಿ ಹೊಂದಿರುವುದು ಸ್ಪಷ್ಟವಾಗಿರುತ್ತದೆ ಎಂದು, ಸದರಿ ಹೆಚ್ಚುವರಿಯಾಗಿ ಅಕ್ರಮ ಮೂಲಗಳಿಂದ ಗಳಿಸಿರುವ ಚರ/ಸ್ಥಿರಾಸ್ತಿಗಳ ಮೌಲ್ಯವು ಆರೋಪಿತ ಸರ್ಕಾರಿ ನೌಕರರ ಶೋಧನಾ ಅವಧಿಯಲ್ಲಿ ನಿಗದಿತ ಮೂಲಗಳಿಂದ ಗಳಿಸಿರುವ ವರಮಾನಕ್ಕಿಂತ ಹೆಚ್ಚಿನ ಮೊತ್ತವಾಗಿರುತ್ತದೆ ಹಾಗೂ ಅಲ್ಲದೆ ಆರೋಪಿತರು ವಿವಿಧ ಬಾಬ್ತುಗಳಿಗಾಗಿ ಮಾಡಿರುವ ಖರ್ಚು ವೆಚ್ಚಗಳು ಇನ್ನೂ ಕೆಲವು ಮೂಲಗಳಿಂದ ಬರಬೇಕಾಗಿದ್ದು, ಇದರಿಂದ ಭವಿಷ್ಯದಲ್ಲಿ ಪ್ರಕರಣದ ತನಿಖೆ ಮುಂದುವರೆದಂತೆ ಹೆಚ್ಚಿನ ಚರ/ಸ್ಥಿರಾಸ್ತಿ ಮತ್ತು ಖರ್ಚುವೆಚ್ಚಗಳ ಒಟ್ಟಾರೆ ಮೌಲ್ಯವು ಇನ್ನೂ ಹೆಚ್ಚಾಗುವ ಸಂಭವವಿರುತ್ತದೆ ಎಂದು ತಿಳಸುತ್ತಾ, ಸದರಿ ಆರೋಪಿತ ಅಧಿಕಾರಿಯು ಪ್ರಕರಣದ ಸುಗಮ ತನಿಖೆಗೆ ಅಡ್ಡಿ ಉಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಅವರನ್ನು ಈ ಕೂಡಲೇ ಅಮಾನತ್ತಿನಲ್ಲಿಡಲು ಹಾಗೂ ಅವರ ಲೀನ್ (ಸ್ಥಾನ) ವನ್ನು ಕೂಡ ಬೇರೆ ಕಡೆಗೆ ವರ್ಗಾಯಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಕರ್ನಾಟಕ ಲೋಕಾಯುಕ್ತದ ಅಪರ ಪೋಲೀಸ್ ಮಹಾ ನಿರ್ದೇಶಕರು, ಶಿಫಾರಸ್ಸು ಮಾಡಿರುತ್ತಾರೆ.

| ಕ್ರ. ಸಂ. | ವಿವರ | ಮೊತ್ತ |
|---|---|---|
| 1. | ಆರೋಪಿತರ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಯ ಒಟ್ಟು | ರೂ. 1,25,04,395/- |
| 2. | ಆರೋಪಿತರ ಒಟ್ಟು ಅಂದಾಜು ಖರ್ಚು | ರೂ. 1,16,50,361/- |
| 3. | ಆರೋಪಿತರ ಒಟ್ಟು ಆದಾಯ | ರೂ. 1,09,80,000/- |
| 4. | ಆರೋಪಿತರ ಒಟ್ಟು ಆಸ್ತಿ ಮತ್ತು ಖರ್ಚು | ರೂ. 1,25,04,395/- (+) ರೂ. 1,16,50,361/- = ರೂ. 2,41,54,756/- |

| | | |
|---|---|---|
| 5. | ಆರೋಪಿತರ ಒಟ್ಟು ಆಸ್ತಿ + ಖರ್ಚು – ಆದಾಯ | ರೂ. 2,41,756-00 (-) ರೂ. 1,09,80,000/- = ರೂ. 1,31,74,756/- |

ಬೆಂಗಳೂರು(ನಗರ) ಜಿಲ್ಲಾ ಪಂಚಾಯತಿಯಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ, ಶ್ರೀ ಕೃಷ್ಣಪ್ಪ ಲೋಹರ್, ಇವರ ಜಾಗಕ್ಕೆ ಮೇಲೆ (2) ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಶ್ರೀ ಪಿ.ವಿ. ವೆಂಕಟೇಶ್, ಇವರನ್ನು ನೇಮಿಸಿ, ಶ್ರೀ ಕೃಷ್ಣಪ್ಪ ಲೋಹರ್, ಇವರಿಗೆ ಸ್ಥಳ ನಿಯುಕ್ತಿಗೊಳಸದೇ ಇದ್ದ ಕಾರಣ, ಸದರಿ ಅಧಿಕಾರಿಯು ಪ್ರಸ್ತುತ ನೇಮಕಾತಿ ಸ್ಥಳ ನಿರೀಕ್ಷಣೆಯಲ್ಲಿರುತ್ತಾರೆ.

ಅಪರ ಪೋಲೀಸ್ ಮಹಾ ನಿರ್ದೇಶಕರು, ತಮ್ಮ ಪತ್ರದೊಂದಿಗೆ ಕಳುಹಿಸಿರುವ ತನಿಖಾಧಿಕಾರಿ ರವರ ವಿಶೇಷ ತನಿಖಾ ವರದಿ, ಪ್ರಥಮ ವರ್ತಮಾನ ವರದಿ, ದಾಳ ವೇಳೆ ಜರುಗಿಸಿದ ಶೋಧನಾ ಪಂಚನಾಮೆ/ಮಹಜರು ಹಾಗೂ ಇತ್ಯಾದಿ ದಾಖಲಾತಿಗಳಿಂದ, ಬೆಂಗಳೂರು(ನ) ಜಿಲ್ಲಾ ಪಂಚಾಯತಿಯಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಕೃಷ್ಣಪ್ಪ ಲೋಹರ್, ಇವರು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸಂಪತ್ತು/ ಆದಾಯ ಹೊಂದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದುದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ, ಸದರಿ ಅಧಿಕಾರಿಯನ್ನು ಸೇವೆಯಿಂದ ಅಮಾನತ್ತುಗೊಳಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಗಿನಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 113 ವಿಸೇಬಿ 2015 ಬೆಂಗಳೂರು ದಿನಾಂಕ:03-07-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕನಾಸೇ(ವನಿಮೇ) ನಿಯಮಗಳು 1957ರ ನಿಯಮ 10(1)(ಎಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಕೃಷ್ಣಪ್ಪ ಲೋಹರ್, ಹಿಂದಿನ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿಯ, ಬೆಂಗಳೂರು ನಗರ, (ಪ್ರಸ್ತುತ ಸ್ಥಳ ನಿರೀಕ್ಷಣೆಯಲ್ಲಿ) ಇವರನ್ನು ಅವರ ವಿರುದ್ಧದ ಇಲಾಖಾ ವಿಚಾರಣೆ ಬಾಕಿ ಇರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತು ಪಡಿಸಿದೆ.

ಶ್ರೀ ಕೃಷ್ಣಪ್ಪ ಲೋಹರ್, ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯತಿಯ, ಬೆಂಗಳೂರು ನಗರ, ಇವರ ಲೀನ್ (ಸ್ಥಾನ) ವನ್ನು ರಾಮನಗರ ಜಿಲ್ಲಾ ಪಂಚಾಯತಿಯ, ಸಹಾಯಕ ಕಾರ್ಯದರ್ಶಿ, ಹುದ್ದೆಗೆ ವರ್ಗಾಯಿಸಿದೆ.

ಸದರಿ ಅಧಿಕಾರಿ ಅಮಾನತ್ತಿನ ಅವಧಿಯಲ್ಲಿ ಅವರು ನಿಯಮಾನುಸಾರ ಜೀವನಾಧಾರ ಭತ್ಯೆಗೆ ಅರ್ಹರಿರುತ್ತಾರೆ.

ಸದರಿ ಅಧಿಕಾರಿಯು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ.ಬಿ&ಸಿ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು

GO

3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು(ನ)
4. ಸಂಬಂಧಪಟ್ಟ ಅಧಿಕಾರಿಗೆ, (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು(ನ) ಇವರ ಮುಖಾಂತರ)

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ ಇವರ ಮಾಹಿತಿಗಾಗಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸೇವೆಗಳು-ಎ ಗ್ರಾಅಪಂ. ರಾಜ್ ಇಲಾಖೆ.
4. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.